**ಗೌರವಾನ್ವಿತ ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ ನ್ಯಾಯಾಲಯ. ತಿ.ನರಸೀಪುರ.**

ಅಸಲು.ದಾವೆ.ನಂ:210/2017

ವಾದಿ : : ಕೃಷ್ಣೇಗೌಡ ಮೃತ ನಂತರ ಅವರ ವಾರಸ್ಸುದಾರರು

DW-1
2/6/26

ವಿರುದ್ಧ

ಪ್ರತಿವಾದಿಗಳು : : ನಾಗರಾಜು ಮೃತ ನಂತರ ಅವರ ವಾರಸ್ಸುದಾರರು ಮತ್ತು ಇತರರು

**<u>ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 18 ನಿಯಮ 4ರ ರೀತ್ಯಾ ಪ್ರಮಾಣಪತ್ರದ ಮೂಲಕ ಮೃತ ಒಂದನೇ ಪ್ರತಿವಾದಿಯ ವಾರಸ್ಸುದಾರರ ಪ್ರತಿವಾದಿ 1(ಎ)ರವರ ಮುಖ್ಯ ವಿಚಾರಣೆ</u>**

ಸಾಕ್ಷಿದಾರರ ಹೆಸರು : ಶ್ರೀಮತಿ ಎನ್.ಕೆ.ದೀಪಶ್ರೀ,
ಗಂಡನ ಹೆಸರು : ಲೇಟ್ ನಾಗರಾಜು,
ವಯಸ್ಸು : 46ವರ್ಷ,
ವೃತ್ತಿ : ಗೃಹಿಣಿ,
ವಾಸ : ಕಗ್ಗಲೀಪುರ.

NOTARY GOVERNMENT OF INDIA

ನಾನು, ಶ್ರೀಮತಿ ಎನ್.ಕೆ.ದೀಪಶ್ರೀ, ಈ ಕೇಸಿನ 1(ಎ)ನೇ ಪ್ರತಿವಾದಿಯಾಗಿ ದೇವರ ಹೆಸರಿನಲ್ಲಿ ಪ್ರಮಾಣಿಸಿ ಹೇಳುವುದೇನೆಂದರೆ,

1. ಈ ದಾವೆಯು ಚಾಲ್ತಿಯಲ್ಲಿರುವಾಗ ನನ್ನ ಯಜಮಾನರಾದ ಒಂದನೇ ಪ್ರತಿವಾದಿಯು ಮೃತರಾಗಿದ್ದು ಅವರ ವಾರಸ್ಸುದಾರರಾಗಿ ನನ್ನನ್ನು ವಾದಿಯು ಕಡತದ ಮೇಲೆ ತಂದಿರುತ್ತಾರೆ. ಈ ಕೇಸಿನ 2ನೇ ಪ್ರತಿವಾದಿ ನನ್ನ ಮಗ ಮತ್ತು 3ನೇ ಪ್ರತಿವಾದಿ ನನ್ನ ಮಗಳು. ಆಗಾಗಿ ನಾನು, ನನ್ನ ಪರವಾಗಿ ಹಾಗೂ ಇತರೆ ಪ್ರತಿವಾದಿಗಳ ಪರವಾಗಿ ಮುಖ್ಯ ವಿಚಾರಣೆಯನ್ನು ಈ ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ.

2. ಮೃತ ವಾದಿಯು ಸಲ್ಲಿಸಿರುವ ಈ ದಾವೆಯು ಕಾನೂನಿನ ಅಡಿಯಲ್ಲಾಗಲೀ ಅಥವಾ ಸಂಗತಿಯ ಮೇಲಾಗಲೀ ನಿಲ್ಲತಕ್ಕದಲ್ಲ. ಆ ಕಾರಣ ಈ ದಾವೆಯು ವಜಾ ಆಗಬೇಕಾಗಿರುತ್ತದೆ.

3. ವಾದಿಯು ನನ್ನ ಯಜಮಾನರ ತಾಯಿಯ ಸಹೋದರನಾಗಿರುತ್ತಾನೆ. ನಮ್ಮ ಯಜಮಾನರು ನಮ್ಮ ಕುಟುಂಬದ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಅವರ ಪರವಾಗಿ ಹಾಗೂ 2 ಮತ್ತು 3ನೇ ಪ್ರತಿವಾದಿಗಳ ಪರವಾಗಿ ರೂ.4,00,000/- (ನಾಲ್ಕು ಲಕ್ಷ) ಗಳನ್ನು ಸಾಲವಾಗಿ ಪಡೆದಿರುತ್ತಾರೆ. ಸದರಿ ಸಾಲದ ಭದ್ರತೆಗಾಗಿ ದಾವಾ ಅನುಸೂಚಿತ ಸ್ವತ್ತು ಮತ್ತು ತಮ್ಮಡೀಪುರ ಗ್ರಾಮದ

...2

N.K. Deepashree.

ಸರ್ವೆ.ನಂ.14/2 ವಿಸ್ತೀರ್ಣ 2 ಎಕರೆ 01 ಗುಂಟೆ ಜಮೀನನ್ನು ದಿನಾಂಕ:23-02-2013 ಮತ್ತು 05-03-2013ರ ಎರಡು ಕ್ರಯದ ಕರಾರನ್ನು ಬರೆದುಕೊಟ್ಟಿರುತ್ತಾರೆ. ಮೃತ ವಾದಿಯು ಸಾಲದ ಭದ್ರತೆಗಾಗಿ ಬರೆದುಕೊಟ್ಟಿದ್ದ ಎರಡು ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ಈ ದಾವೆ ಮತ್ತು ತಿ.ನರಸೀಪುರದ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ಥ.ನ್ಯಾ.ದಂ ನ್ಯಾಯಾಲಯದಲ್ಲಿ ಅಸಲು ದಾವೆ ನಂ.211/2017ರಂತೆ ಸಲ್ಲಿಸಿರುತ್ತಾರೆ. ಎರಡೂ ದಾವೆಗಳಲ್ಲಿ ಸಲ್ಲಿರುವ ದಾವಾಪತ್ರದ ಖಂಡಿಕೆ-2ರಲ್ಲಿ ದಾವಾ ಅನುಸೂಚಿತ ಸ್ವತ್ತಗಳನ್ನು ರೂ.2,55,000/-(ಎರಡು ಲಕ್ಷದ ಐವತ್ತೈದು ಸಾವಿರ) ಗಳಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ ಎಂದು ತಿಳಿಸಿರುವುದು ಶುದ್ಧ ಸುಳ್ಳಿನಿಂದ ಕೂಡಿರುತ್ತವೆ. ನಮ್ಮ ಯಜಮಾನರು ಅಸಲು ದಾವೆ.ನಂ.211/2017ರಂತೆ ತಿ.ನರಸೀಪುರದ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ಥ.ನ್ಯಾ.ದಂ ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾವೆಯನ್ನು ಸಹ ಪ್ರತಿರೋದಿಸಿರುತ್ತಾರೆ.

4. ಮುಂದುವರೆದು ನಮ್ಮ ಯಜಮಾನರು ಮೃತ ವಾದಿಯ ಹೆಸರಿನಲ್ಲಿರುವ ತಿ.ನರಸೀಪುರದ ಶಾಖೆಯ ಸಿ.ಕೆ.ಜಿ.ಬಿ (ಈಗ ಕರ್ನಾಟಕ ಗ್ರಾಮೀಣ ಬ್ಯಾಂಕ್) ಬ್ಯಾಂಕಿಗೆ ದಿನಾಂಕ:09-03-2015ರಂದು ರೂ.98,000/-(ತೊಂಬತ್ತೆಂಟು ಸಾವಿರ)ಗಳನ್ನು ಜಮಾ ಮಾಡಿರುತ್ತಾರೆ. ಹಾಗೆಯೇ ದಿನಾಂಕ:13-03-2013 ಮತ್ತು 28-03-2013ರಂದು ನಮ್ಮ ಯಜಮಾನರು ರೂ.3,100/-(ಮೂರು ಸಾವಿರದ ನೂರು) ಮತ್ತು ರೂ.,5,900/-(ಐದು ಸಾವಿರದ ಒಂಬತ್ತು ನೂರು) ಗಳನ್ನು ವಾದಿಯಿಂದ ಪಡೆದ ಸಾಲಕ್ಕೆ ರೂ.8,000/-(ಎಂಟು ಸಾವಿರ)ಗಳ ಬಡ್ಡಿಯನ್ನು ಮೃತ ವಾದಿಯ ಖಾತೆಗೆ ಜಮಾ ಮಾಡಿರುತ್ತಾರೆ. ಆಗಾಗಿ ವಾದಿಯ ಖಾತೆ.ಸಂಖ್ಯೆ.13119072954 ಕ್ಕೆ ರೂ.1,15,000/-(ಒಂದು ಲಕ್ಷದ ಹದಿನೈದು ಸಾವಿರ) ಗಳನ್ನು ಜಮಾ ಮಾಡಿರುತ್ತಾರೆ. ಆಗಾಗಿ ಮೃತ ವಾದಿಯು ಸಾಲದ ಭದ್ರತೆಗಾಗಿ ಬರೆದುಕೊಟ್ಟಿರುವ ದಾಖಲೆಗಳನ್ನು ದುರುಪಯೋಗ ಪಡಿಸಿಕೊಂಡು ಸಲ್ಲಿಸಿರುವ ದಾವೆಯು ಸಲ್ಲಿಸಿರುವ ದಾವೆಯು ಅನೂರ್ಜಿತವಾಗಿರುತ್ತದೆ.

5. ಮುಂದುವರೆದು ಹೇಳುವುದೇನೆಂದರೆ ನಮ್ಮ ಯಜಮಾನರ ಸಹೋದರನಾದ ಮಾದೇಶು ಮತ್ತು ಮತ್ತೊಬ್ಬ ಸಹೋದರನಾದ ಮೃತ ರಾಮೇಗೌಡರವರ ಮಕ್ಕಳು ಹಾಗೂ ಅವರ ಸಹೋದರಿಯವರು ಸೇರಿ ತಿ.ನರಸೀಪುರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ಥ.ನ್ಯಾ.ದಂ ನ್ಯಾಯಾಲಯದಲ್ಲಿ ಅಸಲು ದಾವೆ

.....3

N.K.Deepashree.

NOTARY GOVERNMENT OF INDIA ... Reg.No.6463

No of Corrections......

ನಂ.111/2022ರಂತೆ ವಿಭಾಗಕ್ಕಾಗಿ ದಾವೆಯನ್ನು ಸಲ್ಲಿಸಿದ್ದು ಅದು ವಿಚಾರಣೆಗಾಗಿ ಬಾಕಿ ಇರುತ್ತದೆ. ಸದರಿ ದಾವೆಯಲ್ಲಿ ಈ ದಾವೆಯ ಅನುಸೂಚಿತ ಸ್ವತ್ತು ದಾವಾ "ಎ' ಷೆಡ್ಯೂಲ್ ನ 5ನೇ ಐಟಂ ಆಸ್ತಿಯಾಗಿದ್ದು ಅದರಲ್ಲಿಯೂ ಸಹ ಭಾಗಾಂಶ ಕೋರಿರುತ್ತಾರೆ. ಆಗಾಗಿ ಪ್ರಶ್ನಿತ ಕ್ರಯದ ಕರಾರನ್ನು ಜಾರಿಗೊಳಿಸಲು ಸಲ್ಲಿರುವ ಈ ದಾವೆಯು ಅನೂರ್ಜಿತವಾಗಿರುತ್ತದೆ. ಸದರಿ ಸಾಲದ ವ್ಯವಹಾರವು ಮೃತ ವಾದಿ ಮತ್ತು ನಮ್ಮ ಯಜಮಾನರು ಹಾಗೂ ನನ್ನ ಮಕ್ಕಳ ನಡುವೆ ಆಗಿರುವುದು ಕೇವಲ ಸಾಲದ ವ್ಯವಹಾರವಾಗಿರುತ್ತದೆ. ಆಗಾಗಿ ಮೃತ ವಾದಿಯು ಸಲ್ಲಿಸಿರುವ ಈ ದಾವೆಯು ಅನೂರ್ಜಿತವಾಗಿದ್ದು ಅದಕ್ಕೆ ಯಾವುದೇ ವ್ಯಾಜ್ಯಕಾರಣವಿರುವುದಿಲ್ಲ.

ಆದ್ದರಿಂದ, ಈ ಘನ ನ್ಯಾಯಾಲಯವು ಮೃತ ವಾದಿಯ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ನ್ಯಾಯಹಿತ ದೃಷ್ಟಿಯಿಂದ ಕೊರುತ್ತೇವೆ.

ಮೇಲೆ ಹೇಳಿದ ಎಲ್ಲಾ ವಿಚಾರಗಳು ಸತ್ಯವಾಗಿದೆ ಎಂದು ಪ್ರಮಾಣಿಸಿ ಈ ಪ್ರಮಾಣಪತ್ರಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ.

ಗುರುತಿಸುವವರು

N.R Deepashree.

ವಕೀಲರು

ಪ್ರಮಾಣೀಸುವವರು

No of Corrections......

GOVERNMENT OF INDIA ★ NOTARY ★

Solemnly Affirmed & Declared before me on 8/6/2026

Notary, Mysore District

**ಸಾಕ್ಷಿಗೆ ದಿನಾಂಕಃ 08.06.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ. ಆರ್.ಎಂ. ವಕೀಲರಿಂದಃ**

ಇಂದು ನಾನು ನನ್ನ ಸಾಕ್ಷಿಯ ವಿಚಾರಣೆ ಕುರಿತಂತೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಚಾರಗಳೆಲ್ಲವೂ ಸತ್ಯವಾಗಿರುತ್ತದೆ ಅದನ್ನು ನಾನೇ ನಮ್ಮ ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ ಮತ್ತು ಅದಕ್ಕೆ ಸಹಿ ಹಾಕಿರುತ್ತೇನೆ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

08/6/26

N.K.Deepashree.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**